

# ಎತ್ತರಕ್ಕೇರಿದವರ ಇತಿಮಿತಿ

◆ **ಪ್ರತಿ ವರ್ಷ ಏಣಿಯ ಎತ್ತರವನ್ನು ಹೆಚ್ಚಿಸಬೇಕಲ್ಲ? ಎಷ್ಟೂಂತ ಹೆಚ್ಚಿಸುತ್ತ ಹೋಗ್ತೀರಿ?**

ಗೊತ್ತಿಲ್ಲ. ಈ ಮರಗಳು 40–50 ವರ್ಷ ಫಸಲು ಕೊಡುತ್ತವಂತೆ. ಇಷ್ಟು ವರ್ಷ ಇವು ನಮಗೆ ಏನೆಲ್ಲ ಕಲಿಸಿವೆ. ಎತ್ತರ ಹೋದಂತೆಲ್ಲ ಕೊಯ್ಲಿನ ತಂತ್ರವನ್ನೂ ಅವೇ ಕಲಿಸುತ್ತವೆ ಬಿಡಿ.

◆ **ಮರಗಳು ಎತ್ತರ ಹೋದಂತೆಲ್ಲ ಅಡಿಕೆ–ತೆಂಗಿನ ರೈತರು ಮಾಡುವಂತೆ ಎರಡನೇ ತಲೆಮಾರಿನ ಹೊಸ ಸಸಿಗಳನ್ನು ಹಾಕುತ್ತೀರಾ?**

ಇಲ್ಲ; ಈಗಾಗಲೇ ಈ ತೋಟ ಸಾಕಷ್ಟು ಸಾಂದ್ರವಾಗಿದೆ. ಮರದಿಂದ ಮರಕ್ಕೆ 30 ಅಡಿ ಜಾಗ ಬಿಡಬೇಕಿತ್ತು; ನಾನು 24 ಅಡಿ ಬಿಟ್ಟು ತುಸು ತಪ್ಪು ಮಾಡಿದ್ದೇನೆ. ಹೊಸ ಸಸಿಗಳನ್ನು ನೆಟ್ಟರೆ ಅವಕ್ಕೆ ಬಿಸಿಲು ಸಾಲುವುದಿಲ್ಲ.

◆ **ಈ ಬಾರ್ಹೀ ತಳಿಯನ್ನೇ ಏಕೆ ಆಯ್ದುಕೊಂಡಿರಿ?**

ಅದು ನನ್ನ ಆಯ್ಕೆ ಆಗಿರಲಿಲ್ಲ. ನಿಝಾಮುದ್ದೀನ್ ಇದನ್ನೇ ಶಿಫಾರಸು ಮಾಡಿದ್ರು. ಖರ್ಜೂರದಲ್ಲಿ 20–30 ತಳಿಗಳಿವೆ. ಗುಜರಾತ್, ರಾಜಸ್ಥಾನದಲ್ಲಿ ದಟ್ಟ ಕೆಂಪಿನ ಖರ್ಜೂರಗಳಿವೆ. ಹಣ್ಣಾದಾಗ ಪಚ್‌ಪಚ್ ಆಗುವ ಜಾತಿಗಳೂ ಇವೆ. ನಮ್ಮ ಬಾರ್ಹೀ ಖರ್ಜೂರವನ್ನು ಕಾಯಿ, ಹಣ್ಣು, ಒಣಹಣ್ಣು ಹೀಗೆ ಯಾವ ಹಂತದಲ್ಲಾದರೂ ಅವರವರ ಇಷ್ಟಕ್ಕೆ, ಸಕ್ಕರೆ ಮಟ್ಟಕ್ಕೆ ತಕ್ಕಂತೆ ಸೇವನೆ ಮಾಡಬಹುದು.

◆ **ನೀವು ಈ ತೋಟಕ್ಕೆ ನೀರುಣಿಸುತ್ತೀರಲ್ಲ? ಅರಬ್ ದೇಶಗಳ ಮರಳುಗಾಡಿನಲ್ಲಿ ಅವು...**

ಅದು ತಪ್ಪು ಕಲ್ಪನೆ. ಅರಬ್ ದೇಶಗಳಲ್ಲೂ ಅಪ್ಪಟ ಮರುಭೂಮಿಗಳಲ್ಲಿ ಇದು ಬೆಳೆಯುವುದಿಲ್ಲ. ಅಲ್ಲೂ ಅಲ್ಲಲ್ಲಿ ತಂಪುಕ್ಷೇತ್ರಗಳಿವೆ. ಅಲ್ಲೂ ಬೇಸಿಗೆಯಲ್ಲಿ ನೀರು ಕೊಡುತ್ತಾರೆ. ಒಂದು ತೆಂಗಿನ ಮರಕ್ಕೆ ಬೇಕಾದಷ್ಟೇ ನೀರು ಇದಕ್ಕೆ ಬೇಕು. ಕೆಳಗೆ ತಂಪಿರಬೇಕು. ನೆತ್ತಿಗೆ ಸಖತ್ 38 ಡಿಗ್ರಿ ಸೆಲ್ಸಿಯಸ್ ಬಿಸಿಲು ಇರಬೇಕು.

◆ **ನಿಮ್ಮದು ಸಾವಯವ ಅಂತೀರಾ. ಈ ಒಣಭೂಮಿಯಲ್ಲಿ ಅವಕ್ಕೆ ಪೋಷಕಾಂಶ ಎಲ್ಲಿಂದ ಸಿಗ್ತದೆ?**

ಕೊಟ್ಟಿಗೆ ಗೊಬ್ಬರ, ಜೀವಾಮೃತ ಕೊಡ್ತೀವಿ. ಮತ್ತೆ

ಮೇಲೆ ಸಿಂಚನ (ಬ್ರಶಿಂಗ್) ಮಾಡುವ ವಿಧಾನವನ್ನು ಕಲಿತು ಬಂದರು. ಫೆಬ್ರುವರಿಯಲ್ಲಿ ಅರಳಿದ ಹೂಗಳು ಏಪ್ರಿಲ್ ಹೊತ್ತಿಗೆ ಕಾಯಿಗಳಾಗಿದ್ದವು. ನೆಲದಿಂದ ಮೂರಡಿ ಎತ್ತರದಲ್ಲಿ ತೂಗಾಡುತ್ತಿದ್ದ ಹೊಂಬಣ್ಣದ ತೆನೆಗಳನ್ನು ನೋಡಿ ದಿವಾಕರ್ ಕಲ್ಪನೆಯ ಸ್ವರ್ಗಕ್ಕೆ ಮೂರೇ ಗೇಣು.

ಎಳೆಯದಾಗಿದ್ದಾಗಲೂ ಸಿಹಿಯಾಗಿಯೇ ಇದ್ದ ಕಾಯಿಗಳು ಆಗಸ್ಟ್ ವೇಳೆಗೆ ಸಕ್ಕರೆಯ ಸಿಹಿ ತುಂಬಿಕೊಂಡು ಕೊಯ್ಲಿಗೆ ಸಿದ್ಧವಾಗಿದ್ದವು. ಅದುವರೆಗೆ ಹೆಸರಿಲ್ಲದ ತೋಟಕ್ಕೆ ದಿವಾಕರ್ 'ಮರಳಿ ಮಣ್ಣಿಗೆ' ಎಂದು ನಾಮಕರಣ ಮಾಡಿದರು. (ಗೂಗಲ್ ನಕಾಶೆಯಲ್ಲಿ ಕನ್ನಡದಲ್ಲಿ ಆ ಹೆಸರನ್ನು ಬರೆದರೂ ಅವರ ತೋಟದ ವಿಹಂಗಮ ನೋಟವನ್ನು ಪಡೆಯಬಹುದು).

ಅದು ಒಂಬತ್ತು ವರ್ಷಗಳ ಹಿಂದಿನ ಕತೆ. ಕಳೆದ ಎಂಟೂ ಕೊಯ್ಲಿನ ಫಸಲುಗಳನ್ನೂ ಇವರು ತಮ್ಮ ಗೆಳೆಯರ ಗುಂಪಿನ ಮೂಲಕ ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ವಿತರಿಸಿದರು. ಚಿನ್ನದಂಥ ಬೆಳೆಯನ್ನು ನೋಡಿ ಅಪ್ಪ ಚಿನ್ನಪ್ಪ ಫುಲ್ ಖುಷ್!

ಅದು ಸಿಹಿಯ ಕತೆ. ಮಧ್ಯೆ ಮಧ್ಯೆ ಅನಿರೀಕ್ಷಿತ ಕಹಿ ಅನುಭವಗಳೂ ದಿವಾಕರ್‌ಗೆ ಆದವು. 2019ರಲ್ಲಿ ಮಳೆಗಾಲ ಜೋರಾಗಿದ್ದಾಗ ಟನ್‌ಗಟ್ಟಲೆ ಕಾಯಿಗಳು ಉದುರಿ ಗೊಬ್ಬರಗುಂಡಿ ಸೇರಿದವು. ಪ್ಲಾಸ್ಟಿಕ್ ಚೀಲಗಳನ್ನು ಹೊದೆಸಿದರು. ಅದು ಸರಿ ಇರಲಿಲ್ಲ. ತೇವಾಂಶ ಜಾಸ್ತಿಯಾಗಿ ಕಾಯಿಗಳೆಲ್ಲ ಕೊಳೆಯುತ್ತಿದ್ದವು. ಆ ಸೀಸನ್ ಹೇಗೋ ಕಳೆಯಿತು. ಮರುವರ್ಷ ಫಲ ಬಂದಾಗ ಇವರೇ ತಲೆ ಓಡಿಸಿ, ದೀರ್ಘಕಾಲ ಬಾಳಿಕೆ ಬರುವ ನೈಲಾನ್ ಛತ್ರಿಗಳನ್ನು ಮಾಡಿಸಿದರು. ಚೀಲದಂತೆ ಗೊನೆಯೊಳಕ್ಕೆ ಅದನ್ನು ತೂರಿಸಿ ಜುಟ್ಟು ಕಟ್ಟಿದರೆ, ಆ ಮೂಟೆಯ ಮೇಲ್ಭಾಗ ಛತ್ರಿಯಂತೆಯೂ ಕೆಳ ಅರ್ಧ ಭಾಗ ಬಲೆಯಂತೆಯೂ ಇತ್ತು. ಚೀಲಗಳನ್ನು ಗೊನೆಗೆ ಹೇಗೆ ಕಟ್ಟಬೇಕು ಎಂದು ತೋಟದ ಕೆಲಸಗಾರರಿಗೆ ತಿಳಿಸಿದರು. ಅಲ್ಲೂ ಒಂದು ವಿಲಕ್ಷಣ ಪ್ರಮಾದ ಘಟಿಸಿತು.

## ತಲೆಕೆಳಗಾದ ರಕ್ಷಾಕವಚ

ದಿವಾಕರ್ ಪೂರ್ಣಾವಧಿ ಕೃಷಿಕರಲ್ಲ. ಅವರು ಬೆಂಗಳೂರಿನ ದೊಡ್ಡಾಲದ ಮರದ ಬಳಿಯಲ್ಲಿ 'ಉದ್ಭವ' ಹೆಸರಿನ ಜೈವಿಕ ಶಿಕ್ಷಣ ಶಾಲೆಯಲ್ಲಿ ಕೃಷಿಪಾಠ ಹೇಳುತ್ತಿದ್ದಾರೆ. ಹಾಗಾಗಿ ವಾರಕ್ಕೊಮ್ಮೆ ಮಾತ್ರ ತೋಟಕ್ಕೆ ಹೋಗುತ್ತಾರೆ. ಮರು ವಾರ ತೋಟಕ್ಕೆ ಹೋದಾಗ ಆಘಾತ ಕಾದಿತ್ತು. ಕೂಲಿಕಾರರು ಎಲ್ಲ ಪ್ಲಾಸ್ಟಿಕ್ ಕವಚಗಳನ್ನೂ ಉಲ್ಟಾ ಹಾಕಿದ್ದರು. ಗೊನೆಯ ಮೇಲ್ಗಡೆ ಬಲೆಯಂತೆ, ಕೆಳಗಡೆ ಛತ್ರಿಯಾಗಿತ್ತು! ಮತ್ತೆ ಅವುಗಳನ್ನೆಲ್ಲ ಬಿಚ್ಚಿಸಿ ಉಲ್ಟಾ ಕಟ್ಟಿಸಿದ್ದಾಯಿತು.

ಮುಂದಿನ ವರ್ಷ ಇನ್ನೊಂದು ಅನಿರೀಕ್ಷಿತ ಘಟಿಸಿತು. ಅದೆಲ್ಲಿಂದಲೋ ಬಾವಲಿಗಳ ದೊಡ್ಡ ದಂಡೇ ಇವರ ತೋಟಕ್ಕೆ ದಾಳಿ ಇಟ್ಟಿತು. ಅವು ಚೀಲದೊಳಕ್ಕೂ ನುಗ್ಗಿ ಗೊನೆಯನ್ನು ಖಾಲಿ ಮಾಡಿದವು. ಎರಡೇ ವಾರಗಳಲ್ಲಿ ಪ್ರತಿಶತ 70ರಷ್ಟು ಇಳುವರಿ ನಷ್ಟವಾಯಿತು.

ಐದನೇ ವರ್ಷ ಮರಗಳಿಗೆಲ್ಲ ಏಪ್ರಿಲ್ ತಿಂಗಳಲ್ಲೇ ಪ್ರತಿ ಮರದ ಕಾಂಡಕ್ಕೂ 'ಮೀನುಬಲೆ' (ಕಾಂಡಮ್!) ಹೊದೆಸಿದರು. ಅದು ಗೊತ್ತಿಲ್ಲದೇ ನೂರಾರು ಬಾವಲಿಗಳು ಬಲೆಗೆ ಸಿಕ್ಕಿ ಬಿದ್ದು ನೇತಾಡತೊಡಗಿದವು. ಕಾಯಿಗಳ ಕೊಯ್ಲಿನ ಬದಲು ಏಣಿ ಹತ್ತಿ ಬಾವಲಿಗಳ ಕೊಯ್ಲು ಮಾಡಬೇಕಾಯಿತು. ಶ್ರಮಿಕರ ಕೈಯಿಂದ ಬಿಡುಗಡೆ ಪಡೆದಿದ್ದೇ ತಡ, ರೆಕ್ಕೆ ಪಟಾರಿಸಿ ಅವು ಮತ್ತಿನ್ನು ಈ ಖರ್ಜೂರದ ಸಹವಾಸವೇ ಬೇಡವೆಂದು ಸಾಗಿಹೋದವು.

'ನಾವೇನೂ ಹಿಂಸೆ ಮಾಡಿಲ್ಲ. ಪಾಪ ಅವುಗಳಿಗೂ ಆಹಾರ ಬೇಕಲ್ಲ? ಹೊಸ ಹಣ್ಣನ್ನು ತಿನ್ನುವ ಉತ್ಸಾಹ

ಖರ್ಜೂರ ಕೈಗೆಟುಕಿದ ಖುಷಿಯಲ್ಲಿ...

